ಶ್ರೀ ಪಿ. ರಾಮದೇವ್.—೧೯೭೧ರಲ್ಲಿ ವಿಶ್ರಾಂತಿ ವೇತನ ಕೊಡಬೇಕು ಎಂದು ತೀರ್ಮಾನ ಆಗಿದ್ದರೂ ಕೂಡ ಅನೇಕರು ವಿಶ್ರಾಂತಿ ವೇತನ ತೆಗೆದುಕೊಳ್ಳದೆ ಇಹಲೋಕವನ್ನು ಬಿಟ್ಟು ಹೋಗಿದ್ದಾರೆ. ದಯವಿಟ್ಟು ಈ ವಿಷಯದ ಬಗ್ಗೆ ತಾವು ಕ್ರಮ ತೆಗೆದುಕೊಂಡು ಇದಕ್ಕೆ ಒಂದು ಗಡುವು ನಿಗದಿ ಮಾಡಿ ವಿಶ್ರಾಂತಿ ವೇತನ ಕೊಡುವುದಕ್ಕೆ ತಾವು ಜವಾಬ್ದಾರಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ೧೯೭೮ರಲ್ಲೆ ಆರ್ಡರ್ ಪಾಸ್ ಆಗಿದೆ. ಇದನ್ನು ೧-೯-೧೯೭೯ರಿಂದ ಕೊಡಬೇಕು ಎಂದು ಮಾಡಿದ್ದೇವೆ. ಇದರಲ್ಲಿ ತೊಂದರೆ ಏನೂ ಆಗುವುದಿಲ್ಲ.

Establishment of High Court Bench at Belgaum Area

750. SRI G. K. TAKKAD (Parasagad).—Will the Minister for Law, Social Welfare and Backward Classes be pleased to State :—

(*a*) whether the Government intend to establish a Bench of High Court in order to provide facilities in the dispensation of justice to the people of Belgaum Division in Northern Karnataka ;

(*b*) whether the Government intend to establish a Bench in Belgaum, Belgaum is a Divisional Headqnarter and which is also having all facilities ;

(*c*) whether the Government have received representations from the public of the Belgaum District, in this behalf ; if so, whether the Government would take suitable action in this behalf ?

SRI L. G. HAVANUR (Minister for Law, Social Welfare and Backward Classes) —

(*a*) The question of establishing o perrnanent Bench of the High Court of Karnataka with jurisdiction over the northern districts of the State is under consideration of the Government.

(*b*) All factors will be taken into account before takings a decision in the matter.

(*c*) Representations have been received. They are being examined.

ಶ್ರೀ ಜಿ. ಕೆ. ತೆಕ್ಕೇಡ್.—ಸ್ವಾಮಿ ಹೈಕೋರ್ಟಿಗೆ ಬರುವ ಕೇಸುಗಳಲ್ಲಿ ಬೆಳಗಾಂ ಮತ್ತು ಗುಲ್ಬರ್ಗ ಜಿಲ್ಲೆಗಳ ಕೇಸುಗಳು ಹೆಚ್ಚು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಲ್. ಜಿ. ಹಾವನೂರು.—ಈ ಬೇಡಿಕೆ ಎಲ್ಲಾ ಕಡೆಗಳಲ್ಲಿ ಬಂದಿದೆ.

ಶ್ರೀ ಜಿ ಕೆ. ತೆಕ್ಕೇಡ್.—ಬೆಂಗಳೂರು ಹೈಕೋರ್ಟಿಗೆ ಬರುವ ಕೇಸುಗಳಲ್ಲಿ ಬೆಳಗಾಂ ಮತ್ತು ಗುಲ್ಬರ್ಗ ಜಿಲ್ಲೆಗಳಿಗೆ ಸೇರಿದಂಥ ಕೇಸುಗಳು ಹೆಚ್ಚು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಎಲ್. ಜಿ. ಹಾವನೂರು.—ಈ ಮಾಹಿತಿಗಾಗಿ ಹೈಕೋರ್ಟನ್ನು ನಾವು ಕೇಳಿದ್ದೇವೆ. ಇನ್ನೂ ಮಾಹಿತಿ ಬಂದಿಲ್ಲ.

ಶ್ರೀ ಜಿ. ಕೆ. ತೆಕ್ಕೇಡ್.—ವಿಶೇಷವಾಗಿ ಬೆಳಗಾಂ ವಿಭಾಗದ ಕೇಸುಗಳಲ್ಲಿ ಬೆಂಗಳೂರು ಹೈಕೋರ್ಟಿಗೆ ಬರತಕ್ಕವುಗಳು ಹೆಚ್ಚು ಎಂಬುದು ತಮ್ಮ ಅಭಿಪ್ರಾಯ ಏನು ಇದೆ ?

ಶ್ರೀ ಎಲ್. ಜಿ. ಹಾವನೂರು.—ಮಾನ್ಯ ಸದಸ್ಯರು ಯಾವುದೇ ಅಭಿಪ್ರಾಯವನ್ನು ಪಡಬಹುದು.

1-30 P.M.

ಶ್ರೀ ಜಿ. ಕೆ. ತಕ್ಕೇಡ್.—ಈ ವಿಷಯದ ಬಗ್ಗೆ ತೀರ್ಮಾನ ಕೈಗೊಳ್ಳುವ ಮುನ್ನ ಬೆಳಗಾಂನಲ್ಲಿ ಶ್ರೇಷ್ಠ ನ್ಯಾಯಾಲಯದ ಪೀಠವನ್ನು ಸ್ಥಾಪಿಸುವುದರಿಂದ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಸಮಸ್ಯೆಯ ಪರಿಹಾರಕ್ಕೆ ನಮಗೆ ಒಂದು ಬಲ ಬರುವುದಿಲ್ಲವೆ ?

ಶ್ರೀ ಎಲ್. ಜಿ. ಹಾವನೂರ್,—ಅದೇ ಕಾರಣದಿಂದ ಮರಾಠಿ ಮಾತನಾಡುವ ಜನರೂ ಕೂಡ ಅದಕ್ಕೆ ವಿರೋಧ ಮಾಡಬಹುದು. ಆದರೆ ಹುಟ್ಟುವುದಕ್ಕೆ ಮುಂಚೆಯೇ ಪುಟ್ಟಪ್ಪ ಎಂದು ಹೆಸರಿಡುವಂತೆ ಕಾರ್ಯ ಆಗಬೇಕೋ, ಬಿಡಬೇಕೋ ಎಂಬ ಬಗ್ಗೆ ನಿರ್ಣಯವಾಗಲ್ಲದೆ ಬೆಳಗಾಂ ಗುಲ್ಬರ್ಗ ಪ್ರಶ್ನೆ ಬರುವುದಿಲ್ಲ.

SRI G. B. SHANKARA RAO.—May I know the consideration that weigh with the Government to have a permanent Bench of the High Court in the northern part of Karnataka and factore that court for establishing a permanent court in that area?

SRI L. G. HAVANUR.—There are various factors that weigh with the Government before any decision is taken. Matters relating to the establishment of High Court Bench at Belgaum or Dharwar or any other matter have to be decided taking into account various factors. We shall take in this case also faetors like convenience to the public, recommendation of the High Court, number of cases filed in the High Court from those areas and many other things.

ಶ್ರೀ ವಿ. ಎಸ್. ಕೌಜಲಗಿ.—ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಕಳೆದ ಎರಡು ವರ್ಷಗಳಿಂದ ನಡೆಯುತ್ತಿದೆ. ತಾವು ಈ ಕಾರ್ಯವನ್ನು ಎಷ್ಟು ದಿವಸದಲ್ಲಿ ಮಾಡಬಹುದೆಂಬುದನ್ನು ಹೇಳುತ್ತೀರಾ?

ಶ್ರೀ ಎಲ್. ಜಿ. ಹಾವನೂರ್.—ಯಾವುದೇ ವಿಷಯದ ಬಗ್ಗೆ ಇಂತಿಷ್ಟೇ ಕಾಲದಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳುವುದು ಶಕ್ಯವಿಲ್ಲದ ಮಾತು.

ಶ್ರೀ ಜಿ. ಕೆ. ತಕ್ಕೇಡ್,—ಬೆಳಗಾಂನಲ್ಲಿ ಹೈಕೋರ್ಟನ್ನು ಸ್ಥಾಪಿಸುವುದಕ್ಕೆ ಮಹಾ ರಾಷ್ಟ್ರೀಯರು ವಿರೋಧ ಮಾಡುತ್ತಾರೆಂಬ ಒಂದೇ ಕಾರಣದಿಂದ ಸರ್ಕಾರ ಅಂಜಿ ಹಿಂದೆ ಸರಿಯುತ್ತಿದೆಯೆ ?

ಶ್ರೀ ಎಲ್. ಜಿ. ಹಾವನೂರ್.—ಹಾಗೆ ಏನು ಇಲ್ಲ. ಬೆಳಗಾಂನಲ್ಲಿ ಹೈಕೋರ್ಟನ್ನು ಸ್ಥಾಪಿಸುವುದರಿಂದ ಮಹಾರಾಷ್ಟ್ರೀಯರ ಪ್ರಭಾವ ಕಡಿಮೆಯಾಗುತ್ತದೆಂದು ಹೇಳಿದರಲ್ಲ ಆ ವಾದಕ್ಕೆ ಪ್ರತಿವಾದವಾಗಿ ಹೇಳಿದೆ. ಇದೇ ಕಾರಣದಿಂದ ಮಹಾರಾಷ್ಟ್ರೀಯರು ವಿರೋಧಿಸಬಹುದೆಂದು ಆ ಬೇಡಿಕೆಯನ್ನು ನಿರಾಕರಿಸುವುದಿಲ್ಲ, ಅಥವಾ ಕನ್ನಡದ ಜನರಿಗೆ ಅನುಕೂಲವಾದೀತು. ಮಹಾಷ್ಟ್ರದವರಿಗೆ ಅನಾನುಕೂಲವಾದೀತೆಂಬ ಕಾರಣದಿಂದ ಹೈಕೋರ್ಟನ್ನು ಅಲ್ಲಿ ಮಾಡುವುದಿಲ್ಲ.

ಶ್ರೀ ಜಿ. ಕೆ. ತಕ್ಕೇಡ್.—ಹೈಕೋರ್ಟನ್ನು ಬೆಳಗಾಂನಲ್ಲಿ ಮಾಡುವುದರಿಂದ ಹೆಚ್ಚು ಬೆಲೆ ಬರುತ್ತದೆಂದು ನನಗನ್ನಿಸುತ್ತದೆ. ಅದೇನಾದರೂ ಸರ್ಕಾರದ ಗಮನದಲ್ಲಿದೆಯೆ?

ಶ್ರೀ ಎಲ್. ಜಿ. ಹಾವನೂರ್.—ಅದು ಅವರ ಅಭಿಪ್ರಾಯ.

Contluuance of villnge officers

816. SRI B. N. BACHE GOWDA (Hoskote).—Will the Minister for Revenue be pleased to state:—

(*a*) the reasons for continuing the services of petels, thoti, thabari, and neeraganti, chakri, in villages of the State although the village offices have been abolished;